ಕನ್ನಡಿಗರ ಧ್ವನಿ

## Sunday 24th April 2022, Page No.01 and Page No.05

**RSST Hon. Sec.A.V.S. Murthy: Honorary Doctorate from Open University**

ವಿಜಯವಾಣಿ ನಂ 1

# ಆನಂದ ಸಂಕೇಶ್ವರರಿಗೆ ಗೌರವ ಡಾಕ್ಟರೇಟ್

## ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ ಘೋಷಣೆ | ನಾಳೆ ಪ್ರದಾನ

■ ವಿಜಯವಾಣಿ ಸುದ್ದಿಜಾಲ ಮೈಸೂರು

ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಲಭಿಸಿದೆ. ಆರ್‌ವಿ ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎ.ವಿ.ಎಸ್.ಮೂರ್ತಿ ಮತ್ತು ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸೇವಾ ಸಂಸ್ಥೆಯ ಉಪಾಧ್ಯಕ್ಷ ಈ.ಎಸ್.ಚಕ್ರವರ್ತಿ ಅವರಿಗೂ ಗೌರವ ಡಾಕ್ಟರೇಟ್ ಘೋಷಿಸಲಾಗಿದೆ.

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕ ಎ.ಬಿ.ಬಸವರಾಜು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ಸಮಕುಲಾಧಿಪತಿಯೂ ಆದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಪಾಲ್ಗೊಳ್ಳಲಿದ್ದಾರೆ ಎಂದು ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು. ಎ.ವಿ.ಎಸ್.ಮೂರ್ತಿ ಶಿಕ್ಷಣ ತಜ್ಞರು, ಉತ್ತಮ ಆಡಳಿತಗಾರರು. ಆರ್.ವಿ. ವಿಶ್ವವಿದ್ಯಾಲಯದ ಸಮಕುಲಾಧಿಪತಿಯಾಗಿ ಹಾಗೂ ಅನೇಕ ಶಿಕ್ಷಣ ಸಂಸ್ಥೆಗಳ ಕುಲಪತಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಆರ್‌ವಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಈ.ಎಸ್.ಚಕ್ರವರ್ತಿ ಕೂಡ ಉತ್ತಮ ಆಡಳಿತಗಾರರು ಮತ್ತು ಶಿಕ್ಷಣ ತಜ್ಞರು. ಬೆಂಗಳೂರಿನ ಟಾಟಾ ಗ್ಲೋಬಲ್ ಸಂಪನ್ಮೂಲ ನಿರ್ವಹಣಾ ಸೇವಾ ಸಂಸ್ಥೆಯ ಉಪಾಧ್ಯಕ್ಷರಾಗಿದ್ದಾರೆ.

ಪುಟ 5



ಎ.ವಿ.ಎಸ್.ಮೂರ್ತಿ



ಆನಂದ ಸಂಕೇಶ್ವರ



ಈ.ಎಸ್.ಚಕ್ರವರ್ತಿ

### ಸಾಧನೆಗೆ ಸಂದ ಗರಿ

ತಜ್ಞರ ಸಮಿತಿಯ ಶಿಫಾರಸಿನ ಮೇರೆಗೆ ಈ ಮೂವರನ್ನು ಗೌರವ ಡಾಕ್ಟರೇಟ್ ಪದವಿ ನೀಡಲು ಆಯ್ಕೆ ಮಾಡಲಾಗಿದ್ದು, ಈ ಪೈಕಿ ಆನಂದ ಸಂಕೇಶ್ವರ ಕಿರಿಯ ವಯಸ್ಸಿನವರು. ಪತ್ರಿಕೋದ್ಯಮ, ಟಿವಿ ಮಾಧ್ಯಮ ಮತ್ತು ಲಾಜಿಸ್ಟಿಕ್ ಸೇವಾ ವಲಯದಲ್ಲಿ ಮಾಡಿರುವ ಸಾಧನೆಯನ್ನು ಗುರುತಿಸಿ ಈ ಪದವಿ ನೀಡಿ ಗೌರವಿಸಲಾಗುತ್ತಿದೆ. ಅವರು ಯುವ ಉದ್ಯಮಿಯಾಗಿ ಸಾವಿರಾರು ಜನರಿಗೆ ಉದ್ಯೋಗ ಅವಕಾಶ ನೀಡಿ ಸಮಾಜದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಎಂದು ಕುಲಪತಿ ಹೇಳಿದರು.

Bengaluru Edition
Apr 24, 2022 Page No. 5
Powered by : eReleGo.com

ವಿಜಯವಾಣಿ ನಂ.1

# ಆನಂದ ಸಂಕೇಶ್ವರರಿಗೆ ಗೌರವ

**ಮೊದಲನೇ ಪುಟದಿಂದ...**

ಘಟಿಕೋತ್ಸವದಲ್ಲಿ 31 ಸಂಶೋಧನಾ ಅಭ್ಯರ್ಥಿಗಳಿಗೆ ಪಿಎಚ್‌ಡಿ ಪದವಿ, 48 ಜನರಿಗೆ ಚಿನ್ನದ ಪದಕ, 38 ಅಭ್ಯರ್ಥಿಗಳಿಗೆ ನಗದು ಬಹುಮಾನ ನೀಡಲಾಗುತ್ತಿದೆ. ಒಟ್ಟು 8,338 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದು ಡಾ.ಎಸ್.ವಿದ್ಯಾಶಂಕರ್ ಮಾಹಿತಿ ನೀಡಿದರು. ಈ ಹಿಂದೆ ಮುಕ್ತ ವಿವಿಯಿಂದ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ವಿಮರ್ಶಕ ಜಿ.ಎಚ್. ನಾಯಕ, ಹಿರಿಯ ಚಿತ್ರ ನಿರ್ದೇಶಕ ಸಿದ್ದಲಿಂಗಯ್ಯ, ರಂಗಕರ್ಮಿ ಬಿ.ಜಯಶ್ರೀ, ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ, ನಟಿ ಭಾರತಿ ವಿಷ್ಣುವರ್ಧನ್, ಮಾಜಿ ಲೋಕಾಯುಕ್ತ ಜಸ್ಟೀಸ್ ಸಂತೋಷ್ ಹೆಗ್ಡೆ ಸೇರಿ ಹಲವು ಪ್ರಮುಖರಿಗೆ ಗೌರವ ಡಾಕ್ಟರೇಟ್ ನೀಡಲಾಗಿದೆ.

**ನಾಳೆ ಪ್ರದಾನ:** ಸೋಮವಾರ (ಏ.25) ಬೆಳಗ್ಗೆ 11.30ಕ್ಕೆ ಮುಕ್ತಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ 17ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಕುಲಾಧಿಪತಿಯೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಪದವಿ ಪ್ರದಾನ ಮಾಡಲಿದ್ದಾರೆ.

ವಿಜಯವಾಣಿ ನಂ 1

# ಕರ್ನಾಟಕಕ್ಕೆ 30 ರ್‍ಯಾಂಕ್

ಮೊದಲನೇ ಪುಟದಿಂದ...



ಆರ್‌ವಿ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ಆಂಡ್ ಕಮ್ಯೂನಿಕೇಷನ್ಸ್ ಪದವಿ ಮುಗಿಸಿದೆ. ಅನಂತರ ನಾನು ಎಲ್ಲೂ ಕೆಲಸಕ್ಕೆ ಹೋಗಲಿಲ್ಲ. ವ್ಯಾಸಂಗ ಆರಂಭಿಸಿದೆ. ಮೂರು ವರ್ಷಗಳ ಕಾಲ ಸತತ ಪ್ರಯತ್ನದ ಫಲವಾಗಿ ಇಂದು ಯುಪಿಎಸ್‌ಸಿಯಲ್ಲಿ 115ನೇ ರ್‍ಯಾಂಕ್ ಸಿಕ್ಕಿದೆ. 2019ರಲ್ಲಿ ಐಪಿಎಸ್ ಸಿಕ್ಕಿತ್ತು. ಆದರೆ ಐಎಎಸ್ ಆಗಬೇಕೆಂಬ ಕನಸಿನೊಂದಿಗೆ ಒಂದು ವರ್ಷ ಡೆಲ್ಲಿಯಲ್ಲಿ ವಾಜಿರಾಂ ಆ್ಯಂಡ್ ರವಿ ಅವರ ಬಳಿ ತರಬೇತಿ ಪಡೆದೆ. ನಂತರ ಚಂದ್ರಾ ಲೇಔಟ್‌ನ ಇನ್‌ಸೈಟ್ ಅಕಾಡೆಮಿಯಲ್ಲಿ ತರಬೇತಿ ಪಡೆದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆಯಬೇಕೆಂದರೆ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಜತೆಗೆ ಪ್ಲಾನ್ ಮಾಡಿಕೊಂಡು ದೀರ್ಘ ಅಧ್ಯಯನವೂ ಜತೆಯಾಗಿರಬೇಕು. ಆಗ ಮಾತ್ರ ಯಶಸ್ಸು ಸಾಧ್ಯ.

| ಆರ್. ಯತೀಶ್ 115ನೇ ರ್‍ಯಾಂಕ್



2019ರಲ್ಲಿ ಬಿ.ಇ ಮುಗಿಸಿ ಅಂದಿನಿಂದ ಯುಪಿಎಸ್‌ಸಿ ವ್ಯಾಸಂಗ ಆರಂಭಿಸಿದೆ. ಐಎಎಸ್ ಆಗಬೇಕು ಎಂಬುದು ಕನಸಾಗಿತ್ತು. ಕಳೆದ ಮೂರು ವರ್ಷಗಳಿಂದ ಸ್ವಯಂ ಅಧ್ಯಯನ ಮಾಡುತ್ತಿದ್ದೆ. ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಸೇವೆಯಲ್ಲಿ ಯಾವುದು ಸಿಕ್ಕರೂ ಸೇವೆಗೆ ಹಾಜರಾಗುತ್ತೇನೆ. ಐಎಎಸ್ ಓದಬೇಕಾದರೆ ಯಾವುದೇ ತರಬೇತಿ ಅಗತ್ಯವಿಲ್ಲ. ಶ್ರದ್ಧೆ, ಕಠಿಣ ಪರಿಶ್ರಮದಿಂದ ಓದಿದರೆ ಗುರಿ ತಲುಪಬಹುದಾಗಿದೆ. ಸಾಮಾನ್ಯ ಪದವಿ ಮಾಡಿರುವವರು ಪ್ರಯತ್ನ ಮಾಡಬಹುದಾಗಿದೆ.

| ಎಂ. ನಿಶ್ಚಯ್ ಪ್ರಸಾದ್ 130ನೇ ರ್‍ಯಾಂಕ್, ಮೈಸೂರು

Bengaluru Edition
Sep 25, 2021 Page No. 14
Powered by : eReleGo.com